ಓ.ಎಸ್.ನಂ.347/2015

ಡಿ.ಡಬ್ಲ್ಯು:1

**ದಿನಾಂಕಃ20.04.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀ ಸವಾಲುಃವಾದಿ ಪರ ಶ್ರೀ.ಕೆ.ಎ.ಎಸ್. ವಕೀಲರಿಂದಃ</u>**

ನಾನು ವಾದಿಯ ಅತ್ತೆಯ ಮಗಳು ಅಂದರೆ ಸರಿ. ವಾದಿ ಮತ್ತು ಅವರ ತಂದೆ ಕಲ್ಲುಬಂಡೆಯಲ್ಲಿ ಕೂಲಿ ಕೆಲಸ ಮಾಡಲು ಹೋಗುತ್ತಾರೆ ಅಂದರೆ ಸರಿ. ದಾವಾ ಆಸ್ತಿ ಇರುವ ಪ್ರದೇಶವನ್ನು ಮೊದಲು ಕಲ್ಲುಗುಂಡಿ ಕೊಳಚೆ ಪ್ರದೇಶ ಎಂದು ಕರೆಯುತ್ತಿದ್ದರು ಅಂದರೆ ಸರಿ. ವಾದಿಗೆ ಕ್ರಯದ ಹಣ ರೂ.3,00,000/- ಗಳನ್ನು ವಾಪಸ್ಸು ಕೊಟ್ಟಿರುವುದಿಲ್ಲ. ವಾದಿ ಮತ್ತು ಅವರ ತಂದೆ ಯಾರಿಗೆ ಹಣ ನೀಡಿ ಬಡ್ಡಿ ವ್ಯವಹಾರ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಕ್ರಯದ ಕರಾರು ಆದ ನಂತರ ನಾನು ಮತ್ತು ನನ್ನ ಗಂಡ ವಾದಿಯಿಂದ ರೂ.3,00,000/-ಗಳನ್ನು

ಪಡೆದುಕೊಂಡಿರುತ್ತೇವೆ ಅಂದರೆ ಸರಿ. ನಾವು ವಾಸ ಮಾಡುತ್ತಿರುವ ದಾವಾ ಆಸ್ತಿಯ ಮನೆಗೆ ಕಾಡು ಜಾತಿಯ ಮರಗಳನ್ನು ಉಪಯೋಗಿಸಲಾಗಿದೆ ಅಂದರೆ ಗೊತ್ತಿಲ್ಲ. ದಾವಾ ಆಸ್ತಿಯ ಮನೆಯ ಗೋಡೆಯನ್ನು ಇಟ್ಟಿಗೆ ಮತ್ತು ಮಣ್ಣಿನಿಂದ ಕಟ್ಟಿ ಪ್ಲಾಸ್ಟರಿಂಗ್ ಮಾಡಲಾಗಿದೆ ಅಂದರೆ ಸರಿ. ಸಾಕ್ಷಿಯು ಮುಂದುವರಿದು ಅದು ಆರ್.ಸಿ.ಸಿ.ಮನೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಮನೆ ರೂ.15,00,000/- ಬೆಲೆ ಬಾಳುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಡಿಪಸಿರುವುದಿಲ್ಲ. ನಿಪಿ-1 ಕರಾರಿನಂತೆ ದಾವಾ ಆಸ್ತಿ ಕುರಿತಂತೆ ವಾದಿಗೆ ಕ್ರಯಪತ್ರ ಮಾಡಿಕೊಡಲು ನಾವು ಭಾದ್ಯಸ್ಥರು ಅಂದರೆ ಸರಿಯಲ್ಲ. ಸಾಕ್ಷಿಯು ನಿಪಿ-1 ಕರಾರಿನ ಮೊದಲ ಪುಟದ ಹಿಂಭಾಗದಲ್ಲಿ ಲಕ್ಷ್ಮೀ ಕೋಂ ದೊರೆಸ್ವಾಮಿ ಎಂಬ ಹೆಸರಿನ ಮುಂದೆ ಇರುವ ಫೋಟೋ ಮತ್ತು ಸಹಿ ತನ್ನದು ಎಂದು ನೋಡಿ ಗುರುತಿಸಿರುತ್ತಾರೆ. ಹಾಗಾಗಿ ಸದರಿ ಫೋಟೋ ಮತ್ತು ಸಹಿಯನ್ನು ನಿಪಿ-1(ಡಿ) ಮತ್ತು ನಿಪಿ-1(ಇ) ಎಂದು ಗುರುತಿಸಲಾಯಿತು. ನಿಪಿ-1 ಕರಾರಿನಂತೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಗೆ ಕ್ರಯಪತ್ರ ಮಾಡಿಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ: ಇರುವುದಿಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ದಿ.ನ್ಯಾ.& ಪ್ರ:ದಃನ್ಯಾ:ದಂ.,ರವರು,
ಕಡೂರು.